# ಕರ್ನಾಟಕ ಸರ್ಕಾರ

## ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ. ಮೈಸೂರು

## 2020–21ನೇ ಸಾಲಿನ ವಾರ್ಷಿಕ ವರದಿ





ಶ್ರೀಮತಿ ಪೂರ್ಣಿಮಾ.ಬಿ.ಆರ್., ಭಾ.ಆ.ಸೇ.
ಆಯುಕ್ತರು
ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ
ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣ,
ದೊಡ್ಡಕೆರೆ ಮೈದಾನ, ಮೈಸೂರು– 570010

**ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ. ಮೈಸೂರು**

## 1. ಪ್ರಾಸ್ತಾವಿಕ:

1885ರಲ್ಲಿ ಅಸ್ತಿತ್ವಕ್ಕೆ ಬಂದ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯದ ಜೊತೆ 2004ರಲ್ಲಿ ಅಸ್ತಿತ್ವಕ್ಕೆ ಬಂದ ಪರಂಪರೆ ಇಲಾಖೆಯನ್ನು ಸರ್ಕಾರಿ ಆದೇಶದ ಸಂಖ್ಯೆ: **ಕಸಂವಾಪ್ರ 10 ಕೆಎಂಯು 2012 ದಿನಾಂಕ 23-2-2012ರಲ್ಲಿ ವಿಲೀನಗೊಳಿಸಿ** ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯನ್ನು ಪುನರ್ ರಚಿಸಿ ಆಯುಕ್ತರನ್ನು ಇಲಾಖೆಯ ಮುಖ್ಯಸ್ಥರನ್ನಾಗಿ ನೇಮಿಸಲಾಗಿದೆ.

ಸರ್ಕಾರದ ಆದೇಶದ ಸಂಖ್ಯೆ:ಕಸಂವಾ 234 ಕೆಎಂಯು 2014 ದಿನಾಂಕ 13.03.2015ರಲ್ಲಿ ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯನ್ನು ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ (Archaeology, Museums and Heritage Department) ಎಂದು ಮರು ನಾಮಕರಣ ಮಾಡಿ ಆದೇಶಿಸಿದೆ.

ಪ್ರಸ್ತುತ ಇಲಾಖೆಯ ಕೇಂದ್ರ ಕಛೇರಿಯು ಮೈಸೂರಿನಲ್ಲಿದ್ದು **ಕಲೆ ಮತ್ತು ಸಂಸ್ಕೃತಿಗೆ** ಸಂಬಂಧಿಸಿದ **ಯೋಜನೆ** ಶೀರ್ಷಿಕೆ ಅಡಿಯಲ್ಲಿ ಇಲಾಖೆಯ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಬರುತ್ತಿದೆ.

## 2. ಇಲಾಖೆಯ ಧ್ಯೇಯೋದ್ದೇಶಗಳು:

ಈ ಇಲಾಖೆಯ ಮೂಲಭೂತ ಕಾರ್ಯ ಚಟುವಟಿಕೆಗಳೆಂದರೆ ಅನ್ವೇಷಣೆ, ಉತ್ಖನನ, ಪ್ರಾಚೀನ ಸ್ಮಾರಕಗಳ ಸಂರಕ್ಷಣೆ, ಶಾಸನಗಳ ಸರ್ವೇಕ್ಷಣೆ, ಪ್ರಾಚೀನ ನಾಣ್ಯಗಳ ಅಧ್ಯಯನ, ಸಂಶೋಧನಾ ಗ್ರಂಥಗಳ ಪ್ರಕಟಣೆ, ವಸ್ತುಸಂಗ್ರಹಾಲಯಗಳ ನಿರ್ವಹಣೆ ಹಾಗೂ ಅಭಿವೃದ್ಧಿ ಮತ್ತು ಪರಂಪರೆ ಕಾರ್ಯ ಚಟುವಟಿಕೆಗಳು, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ರೂಪಿಸಿ ಯಶಸ್ವಿಯಾಗಿ ಅನುಷ್ಠಾನಗೊಳಿಸುತ್ತಿದೆ ಹಾಗೂ ಅವಜ್ಞತೆಗೆ ತುತ್ತಾಗಿರುವ ಅಮೂಲ್ಯವಾದ ಪುರಾತನ ಶಿಲ್ಪಗಳು, ಪ್ರಾಚೀನ ಶಿಲಾಶಾಸನಗಳು, ನಾಣ್ಯಗಳು, ತಾಮ್ರ ಪಟಗಳು ಮುಂತಾದವುಗಳನ್ನು ಇಲಾಖೆಯ ವಸ್ತುಸಂಗ್ರಹಾಲಯದಲ್ಲಿ ಸಂಗ್ರಹಿಸಿ ಅವುಗಳನ್ನು ಮುಂದಿನ ಪೀಳಿಗೆಗೆ ಸಂರಕ್ಷಿಸುವ ಹಾಗೂ ಸಾರ್ವಜನಿಕ ವೀಕ್ಷಣೆಗೆ ತೆರೆದಿಡುವ ಜವಾಬ್ದಾರಿಯನ್ನು ಸಹ ಇಲಾಖೆಯು ನಿರ್ವಹಿಸುತ್ತಿದೆ.

ಐತಿಹಾಸಿಕ ಹಿನ್ನೆಲೆಯುಳ್ಳ ಮೈಸೂರು, ಶ್ರೀರಂಗಪಟ್ಟಣ, ಬೀದರ್, ಕಲಬುರಗಿ, ಬಿಜಾಪುರ ಹಾಗೂ ಕಿತ್ತೂರು ಸೇರಿದಂತೆ ಒಟ್ಟು ಆರು ಸ್ಥಳಗಳನ್ನು 2004ರಲ್ಲಿ ಮತ್ತು 2012-13ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಸನ್ನತಿ, ನಾಗಾವಿ, ಕಮ್ಮಟಗಿ, ಬಾದಾಮಿ, ಐಹೊಳೆ, ಬೆಂಗಳೂರು, ಲಕ್ಕುಂಡಿ, ಬನವಾಸಿ, ತಲಕಾಡು, ಬಳ್ಳಿಗಾವಿ, ಬೇಲೂರು, ಹಳೇಬೀಡು, ಮಳಖೇಡ, ಮೇಲುಕೋಟೆ ಸೇರಿದಂತೆ ಹದಿನಾಲ್ಕು ಪ್ರದೇಶಗಳನ್ನು ಪಾರಂಪರಿಕ ಪ್ರದೇಶಗಳೆಂದು ಘೋಷಣೆ ಮಾಡಲಾಗಿದೆ. ಪ್ರಸ್ತುತ 20 ಪಾರಂಪರಿಕ

ಪ್ರದೇಶಗಳಿದ್ದು ಅವುಗಳಲ್ಲಿರುವ ಸ್ಮಾರಕಗಳ, ಕಟ್ಟಡಗಳ ಇನ್‌ವೆಂಟರಿ ತಯಾರಿಸಿ, ಸಮಗ್ರ ಅಭಿವೃದ್ಧಿ ಯೋಜನೆಯಂತೆ ಸಂರಕ್ಷಣಾ ಕಾರ್ಯವನ್ನು ಕೈಗೊಳ್ಳುತ್ತಿದೆ.

ಇಲಾಖೆಯ ಆಡಳಿತ ವ್ಯಾಪ್ತಿಯಲ್ಲಿ 5 ಉಪನಿರ್ದೇಶಕರ ಕಛೇರಿಗಳಿದ್ದು ಇವುಗಳು ಮೈಸೂರು, (ಪರಂಪರೆ) ಕಲಬುರಗಿ, ಬೆಂಗಳೂರು, ಧಾರವಾಡ ಹಾಗೂ ಕಮಲಾಪುರ (ಹಂಪಿ)ಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಬೆಂಗಳೂರು, ಚಿತ್ರದುರ್ಗ, ಶಿವಮೊಗ್ಗ, ಮೈಸೂರು, ಶ್ರೀರಂಗಪಟ್ಟಣ, ಯಳಂದೂರು, ಹಾಸನ, ಮಡಿಕೇರಿ, ಮಂಗಳೂರು, ಕಿತ್ತೂರು, ಗದಗ, ಕಲಬುರಗಿ, ರಾಯಚೂರು, ಹೂವಿನಹಡಗಲಿ, ಬಸವಕಲ್ಯಾಣ ಮತ್ತು ಅಥಣಿ (ಶಿಲ್ಪಕಲಾ ಗ್ಯಾಲರಿ) ಸೇರಿದಂತೆ ಒಟ್ಟು ಹದಿನಾರು ಸರ್ಕಾರಿ ಸಂಗ್ರಹಾಲಯಗಳು ಮತ್ತು ಬೆಂಗಳೂರಿನ ವೆಂಕಟಪ್ಪ ಚಿತ್ರಶಾಲೆ ಕಲಾ ಗ್ಯಾಲರಿ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿವೆ.

**3. ಸಿಬ್ಬಂದಿಯ ವಿವರಗಳು:**

| ಹುದ್ದೆಗಳ ಸಮೂಹ | ಮಂಜೂರಾಗಿರುವ ಹುದ್ದೆಗಳು | ಭರ್ತಿಯಾಗಿರುವ ಹುದ್ದೆಗಳು | ಪುರುಷರು | ಮಹಿಳೆಯರು | ಖಾಲಿಯಿರುವ ಹುದ್ದೆಗಳ ಸಂಖ್ಯೆ |
|---|---|---|---|---|---|
| ಎ | 12 | 04 | 02 | 02 | 8 |
| ಬಿ | 07 | 06 | 04 | 02 | 01 |
| ಸಿ | 84 | 41 | 27 | 14 | 43 |
| ಡಿ | 116 | 31 | 21 | 10 | 85 |
| **ಒಟ್ಟು** | **219** | **82** | **54** | **28** | **137** |

**4. ವೃಂದ ಮತ್ತು ನೇಮಕಾತಿ ನಿಯಮಗಳು:**

ಪುರಾತತ್ವ ಮತ್ತು ಸಂಗ್ರಹಾಲಯಗಳ ಇಲಾಖೆಗೆ ಸರ್ಕಾರದ ಆದೇಶ ಸಂಖ್ಯೆ:ಐಟಿವೈ:67: ಕೆಎಂಯು: 86 ದಿನಾಂಕ 28-2-1992ರಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಲಾಗಿತ್ತು. ಪ್ರಸ್ತುತ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಪುನರ್ ರಚನೆ ಕುರಿತಂತೆ, ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಸಂಬಂಧಿಸಿದಂತೆ ಸರ್ಕಾರದ ಹಂತದಲ್ಲಿ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ.

**5. ಕಾಯ್ದೆ ಮತ್ತು ನಿಯಮಗಳು:**

ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯು ಕೆಳಕಂಡ ಕಾಯ್ದೆ ಮತ್ತು ನಿಯಮಗಳನ್ನು ಹೊಂದಿರುತ್ತದೆ.

1) ಕರ್ನಾಟಕ ಪ್ರಾಚೀನ ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳು ಮತ್ತು ಅವಶೇಷಗಳ ಅಧಿನಿಯಮ 1961 ಮತ್ತು ನಿಯಮಗಳು 1965.
2) ಕರ್ನಾಟಕ ಗುಪ್ತನಿಧಿ ಕಾಯ್ದೆ 1962 ಮತ್ತು ನಿಯಮಗಳು 1963.

**6. ಸಾರ್ವಜನಿಕ ಕುಂದು ಕೊರತೆಗಳು:**

ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆ ಕುರಿತಂತೆ ಸಾರ್ವಜನಿಕರಿಂದ ಹಾಗೂ ಸಂಘ ಸಂಸ್ಥೆಗಳಿಂದ ಸ್ಮಾರಕಗಳ ಸಂರಕ್ಷಣೆಗಾಗಿ ಮನವಿಗಳು ಬರುತ್ತಿದ್ದು ಅವುಗಳನ್ನು ಆದ್ಯತೆಯ ಮೇರೆಗೆ ಇಲಾಖೆಯಲ್ಲಿ

ಲಭ್ಯವಿರುವ ಅನುದಾನವನ್ನು ಗಮನದಲ್ಲಿರಿಸಿಕೊಂಡು ಸಂರಕ್ಷಣಾ ಕಾರ್ಯವನ್ನು ನಿರ್ವಹಿಸಲಾಗುತ್ತಿದೆ.

7. **ಇಲಾಖೆಯ ಪಿ.ಡಿ.ಖಾತೆ :**

ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು ಇವರ ವೈಯಕ್ತಿಕ ಠೇವಣಿ ಖಾತೆಯ ಸಂಖ್ಯೆ:06000001ನ್ನು ಉಪ ನಿರ್ದೇಶಕರು, ಜಿಲ್ಲಾ ಖಜಾನೆ ಮೈಸೂರುರವರ ಪತ್ರದ ದಿನಾಂಕ:30.10.2019ರನ್ವಯ ಖಜಾನೆ-2ಕ್ಕೆ ದಿನಾಂಕ:21.11.2019ರಂದು ಮೈಗ್ರೇಟ್ ಮಾಡಲಾಗಿದೆ.

ಖಜಾನೆಯಲ್ಲಿರುವ ಇಲಾಖೆಯ ಪಿಡಿ ಖಾತೆ ಸಂಖ್ಯೆ.27577೦028ನ್ನು ದಿನಾಂಕ:01.04.2020 ರಿಂದ 31.03.2021ರವರೆಗೆ ಮುಂದುವರೆಸಲು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:ಆಇ 05 ಟಿಎಆರ್ 2020 ದಿನಾಂಕ:23.06.2020ರಲ್ಲಿ ಮಂಜೂರಾತಿ ನೀಡಿರುತ್ತಾರೆ.

ಅದರಂತೆ ಪ್ರಸಕ್ತ ಸಾಲಿನ ಪ್ರಾರಂಭಿಕ ಠೇವಣಿಯಾಗಿ ರೂ.15,26,05,564/-ಗಳಿರುತ್ತದೆ ಹಾಗೂ 2020-21ನೇ ಸಾಲಿನ ಜನವರಿ-2021ರ ಮಾಹೆಯ ಅಂತ್ಯಕ್ಕೆ ವಿವಿಧ ಇಲಾಖೆಗಳಿಂದ ರೂ.2,39,13,300/- ಗಳ ಅನುದಾನ ಬಿಡುಗಡೆಯಾಗಿದ್ದು, ಜನವರಿ-2021ರ ಮಾಹೆಯ ಅಂತ್ಯಕ್ಕೆ ಒಟ್ಟು ರೂ.1,69,30,138/-ಗಳ ಅನುದಾನವನ್ನು ಈ ಕೆಳಕಂಡ ಸಂರಕ್ಷಣಾ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿ ವೆಚ್ಚ ಮಾಡಲಾಗಿದೆ. ವಿವರ ಇಂತಿದೆ.

| ಕ್ರ ಸಂ | ಕಾಮಗಾರಿ ಹೆಸರು | 2020-21ನೇ ಸಾಲಿನಲ್ಲಿ ಮಾಡಲಾಗಿರುವ ವೆಚ್ಚ |
|---|---|---|
| 1 | ರೋರಿಕ್ ಮತ್ತು ದೇವಿಕಾರಾಣಿ ರೋರಿಕ್ ಎಸ್ಟೇಟ್ ಮಂಡಳಿ ಅಭಿವೃದ್ಧಿ ಕಾರ್ಯಗಳಿಗಾಗಿ. | 745406 |
| 2 | ಚಾಮುಂಡಿ ಬೆಟ್ಟದ, ಶ್ರೀ ಚಾಮುಂಡೇಶ್ವರಿ ದೇವಾಲಯದ ಸಮೂಹ ದೇವಾಲಯವಾದ ಮೈಸೂರು ನಗರದ ಅರಮನೆ ಆವರಣದಲ್ಲಿರುವ ಶ್ರೀ ಪಾಂಡುರಂಗ ದೇವಾಲಯದ ಸಂರಕ್ಷಣೆ ಹಾಗೂ ಜೀರ್ಣೋದ್ಧಾರ ಕಾಮಗಾರಿ. | 345610 |
| 3 | ಲಾಲ್‌ಬಾಗ್ ಸಸ್ಯಶಾಸ್ತ್ರೀಯ ತೋಟದಲ್ಲಿರುವ ಕ್ರಂಬಿಗಲ್ ಹಾಲ್ ಕಟ್ಟಡದ ಸಂರಕ್ಷಣಾ ಕಾಮಗಾರಿಗಾಗಿ. | 3872159 |
| 4 | ಶ್ರೀ ಭುವನೇಶ್ವರಿ ದೇವಸ್ಥಾನ, ಅರಮನೆ ಆವರಣ, ಮೈಸೂರು. | 1100000 |
| 5 | ಶ್ರೀ ಪ್ರಸನ್ನಕೃಷ್ಣಸ್ವಾಮಿ ದೇವಸ್ಥಾನ, ಅರಮನೆ ಆವರಣ, ಮೈಸೂರು. | 450000 |
| 6 | ಶ್ರೀ ಶ್ವೇತವರಹಸ್ವಾಮಿ ದೇವಸ್ಥಾನ, ಅರಮನೆ ಆವರಣ, ಮೈಸೂರು. (ಎರಡನೇ ಹಂತ) | 2500000 |
| 7 | ಚಾಮರಾಜನಗರ ಜಿಲ್ಲೆ, ಕೊಳ್ಳೆಗಾಲ ಶಿವನಸಮುದ್ರದ ಬಳಿಯಿರುವ ವೇಸ್ಲಿ ಸೇತುವೆ ದುರಸ್ತಿ. | 4293663 |
| 8 | ಮಂಡ್ಯ ಜಿಲ್ಲೆ, ಪಾಂಡವಪುರ ತಾಲ್ಲೂಕು, ಚಿನಕುರಳಿಯಲ್ಲಿರುವ ಶ್ರೀ ರಾಮೇಶ್ವರ ದೇವಾಲಯದ ಸಂರಕ್ಷಣಾ ಕಾಮಗಾರಿ. | 980000 |

| | | |
|---|---|---|
| 9 | ಮಂಡ್ಯ ಜಿಲ್ಲೆ, ಪಾಂಡವಪುರ ತಾಲ್ಲೂಕು, ಚಿನಕುರಳಿಯಲ್ಲಿರುವ ಶ್ರೀ ಅಭಯ ಆಂಜನೇಯ ಸ್ವಾಮಿ ದೇವಾಲಯದ ಸಂರಕ್ಷಣಾ ಕಾಮಗಾರಿ. | 726300 |
| 10 | ಮೈಸೂರು ನಗರದ ಸಂತೆಪೇಟೆಯಲ್ಲಿರುವ ಶ್ರೀ ಬೊಮ್ಮಯ್ಯನವರ ಛತ್ರದ ಕಟ್ಟಡ ಸ್ವಚ್ಛಗೊಳಿಸುವ ಕಾಮಗಾರಿ. | 48000 |
| 11 | ಮಂಡ್ಯ ಜಿಲ್ಲೆ, ಪಾಂಡವಪುರ ತಾಲ್ಲೂಕು, ಗುಮ್ಮನಹಳ್ಳಿಯಲ್ಲಿರುವ ಶ್ರೀ ಸಪ್ತಮಾತೃಕೆ ದೇವೀರಮ್ಮ ದೇವಾಲಯದ ಸಂರಕ್ಷಣಾ ಕಾಮಗಾರಿ. | 1869000 |
| | **ಒಟ್ಟು ಮೊತ್ತ** | **1,69,30,138/-** |

## 8. ಆಯವ್ಯಯ: ರೂ.ಲಕ್ಷಗಳಲ್ಲಿ

| ಕ್ರಮ ಸಂಖ್ಯೆ | ಯೋಜನಾ ಲೆಕ್ಕಶೀರ್ಷಿಕೆ | 2020-21ನೇ ಸಾಲಿಗೆ ನಿಗಧಿಪಡಿಸಿರುವ ಅನುದಾನ | 2020-21ನೇ ಜನವರಿ-2021ರ ಅಂತ್ಯಕ್ಕೆ ಬಿಡುಗಡೆಯಾಗಿರುವ ಅನುದಾನ | 2020-21ನೇ ಸಾಲಿನ ಜನವರಿ-2021ರ ಅಂತ್ಯಕ್ಕೆ ಕೈಗೊಳ್ಳಲಾದ ವೆಚ್ಚ | ಶೇಕಡವಾರು ಬಿಡುಗಡೆಯಾಗಿರುವ ಅನುದಾನಕ್ಕೆ ಅನುಗುಣವಾಗಿ |
|---|---|---|---|---|---|
| 1 | 2205-00-102-0-79 ಚಾಲುಕ್ಯ ಪಾರಂಪರಿಕ ಪ್ರದೇಶ ನಿರ್ವಹಣಾ ಪ್ರಾಧಿಕಾರ | 1.00 | 1.00 | 1.00 | 100% |
| 2 | 2205-00-102-1-92 ಲಕ್ಕುಂಡಿ ಅಭಿವೃದ್ಧಿ ಪ್ರಾಧಿಕಾರ | 1.00 | 0.25 | 0.00 | 0% |
| 3 | 2205-00-103-0-01 ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ | 811.00 | 798.98 | 469.63 | 79% |
| 4 | 2205-00-103-0-18 ಹಂಪಿ ಅಭಿವೃದ್ಧಿ ಪ್ರಾಧಿಕಾರ | 42.58 | 42.58 | 42.58 | 100% |
| 5 | 2205-00-103-0-21 ಪರಂಪರೆ ಆಯುಕ್ತರು | 600.00 | 595.85 | 180.64 | 53% |
| 6 | 2205-00-103-0-25 ಸಂಸ್ಕೃತಿ ಸಂಗ್ರಹಾಲಯ | 25.00 | 25.00 | 20.50 | 82% |
| 7 | 2205-00-107-0-01 ವಸ್ತುಸಂಗ್ರಹಾಲಯದ ಅಭಿವೃದ್ಧಿ | 429.00 | 417.38 | 177.49 | 71% |
| 8 | 4202-04-101-0-02 (ಬಂಡವಾಳ ವೆಚ್ಚ) | 400.00 | 400.00 | 50.54 | 13% |

| | | | | | |
|---|---|---|---|---|---|
| | ಪುರಾತತ್ವ ಮತ್ತು ವಸ್ತು ಸಂಗ್ರಹಾಲಯಗಳು | | | | |
| **ಒಟ್ಟು ಮೊತ್ತ** | | **2309.58** | **2281.04** | **942.38** | **41%** |

**9. ಮುಂದುವರೆದ ಯೋಜನಾ ಕಾರ್ಯಕ್ರಮ:**

2020–21ನೇ ಸಾಲಿಗೆ ಯೋಜನೆ ಬಾಬ್ತಿನಡಿಯಲ್ಲಿ ರೂ.2309.58ಲಕ್ಷ ಅನುದಾನವನ್ನು ಕಲ್ಪಿಸಲಾಗಿದ್ದು, ಇದಕ್ಕೆ ಸರ್ಕಾರದ ಆದೇಶದ ಸಂಖ್ಯೆ:ಟಿಓಆರ್ 60 ಟಿಡಿಎ 2020, ಬೆಂಗಳೂರು ದಿನಾಂಕ:05.09.2020ರಲ್ಲಿ ಕ್ರಿಯಾ ಯೋಜನೆಗೆ ಸರ್ಕಾರದ ಅನುಮೋದನೆ ದೊರೆತಿದೆ.

ಪ್ರಸಕ್ತ ಸಾಲಿನಲ್ಲಿ ಬಿಡುಗಡೆಯಾಗಿರುವ ಮೊತ್ತ **ರೂ.2281.04**ಲಕ್ಷಗಳಲ್ಲಿ ಜನವರಿ–2021ರ ಮಾಹೆಯ ಅಂತ್ಯಕ್ಕೆ ರೂ.942.38ಲಕ್ಷಗಳ ವೆಚ್ಚ ಮಾಡಲಾಗಿದ್ದು, ಶೇ.41% ರಷ್ಟು ಪ್ರಗತಿಯನ್ನು ಸಾಧಿಸಲಾಗಿದೆ.

**10 ಸಂರಕ್ಷಣಾ ಕಾಮಗಾರಿ :**

ಇಲಾಖೆಯ ವತಿಯಿಂದ ವಿವಿಧ ಲೆಕ್ಕಶೀರ್ಷಿಕೆಯಡಿ ಸ್ಮಾರಕಗಳ ಸಂರಕ್ಷಣೆ ವಿವಿಧ ಅಭಿವೃದ್ಧಿ ಕಾಮಗಾರಿಗಳ ಕ್ರಿಯಾಯೋಜನೆಗೆ ಸರ್ಕಾರದಿಂದ ಅನುಮೋದನೆಯನ್ನು ಪಡೆದು, ಅದರನ್ವಯ ಸಿದ್ದಪಡಿಸಿದ ಅಂದಾಜುಪಟ್ಟಿಗಳಿಗೆ ಆಡಳಿತಾತ್ಮಕ ಮತ್ತು ತಾಂತ್ರಿಕ ಅನುಮೋದನೆಯನ್ನು ಲೋಕೋಪಯೋಗಿ ಇಲಾಖೆ ಮತ್ತು ಪ್ರವಾಸೋದ್ಯಮ ಇಲಾಖೆಯಲ್ಲಿ ರಚಿತವಾಗಿರುವ ತಾಂತ್ರಿಕ ಸಲಹಾ ಸಮಿತಿ ಇವರಿಂದ ತಾಂತ್ರಿಕ ಮಂಜೂರಾತಿಯನ್ನು ಪಡೆದು ಇ–ಟೆಂಡರ್ ಮೂಲಕ ಸಂರಕ್ಷಣಾ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.

## 2205–00–103–0–01–059 ಇತರೆ ಖರ್ಚುಗಳು

| ಕ್ರ.ಸಂ | ಕಾಮಗಾರಿಗಳ ವಿವರ | 2020–21ನೇ ಸಾಲಿನ ವೆಚ್ಚ ರೂ.ಗಳಲ್ಲಿ |
|---|---|---|
| ಅ | **ಮುಂದುವರೆದ ಕಾಮಗಾರಿಗಳು** | |
| 1 | ಚಾಮರಾಜನಗರ ಜಿಲ್ಲೆ ಚಾಮರಾಜನಗರ ತಾಲ್ಲೂಕು ಕನಕಗಿರಿಯಲ್ಲಿರುವ ಶ್ರೀ ವಿಜಯ ಪಾರ್ಶ್ವನಾಥ ದೇವಾಲಯದ ಸುತ್ತುಗೋಡೆಯ ಸಂರಕ್ಷಣಾ ಕಾಮಗಾರಿ. | 1787886 |
| 2 | ಹಾವೇರಿ ಜಿಲ್ಲೆ ಶಿಗ್ಗಾಂ ತಾಲ್ಲೂಕು ಹೀರೆಮಣಕಟ್ಟಿ ಗ್ರಾಮದಲ್ಲಿರುವ ಶ್ರೀ ಕಲ್ಮೇಶ್ವರ ದೇವಾಲಯದ ಸಂರಕ್ಷಣಾ ಕಾಮಗಾರಿ | 361453 |
| 3 | ಹಾವೇರಿ ಜಿಲ್ಲೆ ಬ್ಯಾಡಗಿ ತಾಲ್ಲೂಕು ಶಿಡೆನೂರು ಗ್ರಾಮದಲ್ಲಿರುವ ಶ್ರೀ ವೀರಭದ್ರೇಶ್ವರ ಮತ್ತು ಕಲ್ಮೇಶ್ವರ ದೇವಾಲಯದ ಸಂರಕ್ಷಣಾ ಕಾಮಗಾರಿ | 638057 |
| 4 | ಪರಂಪರೆ ಕಟ್ಟಡಗಳ ಸ್ವಚ್ಚತೆ ತುರ್ತು ದುರಸ್ಥಿ ನಿರ್ವಹಣೆ ವೆಚ್ಚ. | 123735 |
| | **200 ನಿರ್ವಹಣೆ : ಮುಂದುವರೆದ ಕಾಮಗಾರಿಗಳು** | |
| 5 | ಮೈಸೂರು ನಗರದಲ್ಲಿರುವ ಕೇಂದ್ರ ಕಛೇರಿಗೆ ಮೀಟಿಂಗ್ ಹಾಲ್‌ಗೆ ಹಾಗೂ ಕಛೇರಿಯ ಒಳ ಮತ್ತು ಹೊರ ಭಾಗಕ್ಕೆ ಬಣ್ಣ ಲೇಪನ ಹಾಗೂ ಉದ್ಯಾನವನ ನಿರ್ವಹಣೆ ಇತ್ಯಾದಿ ಕಾಮಗಾರಿ. | 96521 |

## ಲೆಕ್ಕಶೀರ್ಷಿಕೆ: 2205–00–103–0–21 ಪರಂಪರೆ ಆಯುಕ್ತರು

| ಕ್ರ.ಸಂ | ಕಾಮಗಾರಿಗಳ ವಿವರ | 2020–21ನೇ ಸಾಲಿನ ವೆಚ್ಚ ರೂ.ಗಳಲ್ಲಿ |
|---|---|---|
| | **ಆಯವ್ಯಯದಲ್ಲಿ ಘೋಷಿತ ಕಾರ್ಯಕ್ರಮಗಳು** | |
| | **ಆಯವ್ಯಯ ಭಾಷಣದ ಕಂಡಿಕೆ ಸಂಖ್ಯೆ (253)** | |
| 1 | ರಾಜ್ಯದಲ್ಲಿ 25,000ಕ್ಕೂ ಹೆಚ್ಚು ಐತಿಹಾಸಿಕ ಮಹತ್ವವುಳ್ಳ ದೇವಸ್ಥಾನಗಳು, ಪ್ರಾಚೀನ ಸ್ಥಳಗಳು, ಸ್ಮಾರಕಗಳಿದ್ದು ಇವುಗಳನ್ನು ಹಂತಹಂತವಾಗಿ ಸರ್ವೆ ಮತ್ತು ದಾಖಲೀಕರಣಗೊಳಿಸಲು "ಸಂರಕ್ಷಣಾ" ಯೋಜನೆ. | 1000000 |
| | **ಆಯವ್ಯಯ ಭಾಷಣದ ಕಂಡಿಕೆ ಸಂಖ್ಯೆ (309)** | |
| 2 | 600 ಸ್ಮಾರಕಗಳ ಸರ್ವೆ ಮತ್ತು ಸಂರಕ್ಷಣೆ – ಕರ್ನಾಟಕ ಜ್ಞಾನ ಆಯೋಗದ ಸಹಭಾಗಿತ್ವದಡಿ ಕರ್ನಾಟಕ ರಿಮೋಟ್ ಸೆನ್ಸಿಂಗ್‌ರವರ ಮೂಲಕ ಘೋಷಿತ 832 ಸಂರಕ್ಷಿತ ಸ್ಮಾರಕಗಳ 3ಡಿ ಸ್ಕ್ಯಾನಿಂಗ್ ಮಾಡುವ ಕೆಲಸ. | 740750 |
| | **ಆಯವ್ಯಯ ಭಾಷಣದ ಕಂಡಿಕೆ ಸಂಖ್ಯೆ (284)** | |
| 3 | ವಿಶ್ವ ಪರಂಪರೆ ತಾತ್ಕಾಲಿಕ ಪಟ್ಟಿಯಲ್ಲಿ ಸೇರ್ಪಡೆಯಾಗಿರುವ FORTS AND MONUMENTS OF DECCAN SULTHNATE ಇದರ ಡೋಸಿಯರ್ ತಯಾರಿಸುತ್ತಿರುವ ಖಲೂಅಓಈ,಼ಜುರಿಯಟಣಊಣ ಸಂಸ್ಥೆಗೆ. | 1724085 |
| 4 | SACRED ENSEMBLES OF HOYSALA (HOYSALA ARCHITECTURE SERIES INCLUDING BELUR AND HALEBIDU) ತಾಣವನ್ನು ವಿಶ್ವ ಪಾರಂಪರಿಕ ಅಂತಿಮಪಟ್ಟಿಗೆ ಸೇರ್ಪಡೆ ಮಾಡುವ ಸಲುವಾಗಿ ಡೋಸಿಯಾರ್ ಮತ್ತು ಸೈಟ್ ಮ್ಯಾನೇಜ್‌ಮೆಂಟ್ ಪ್ಲಾನ್‌ನ್ನು ಇನ್‌ಟ್ಯಾಕ್ ಸಂಸ್ಥೆಯ ವತಿಯಿಂದ ತಯಾರಿಸುವ ಕೆಲಸ. | 2050000 |
| 5 | Evolution of temple Architecture consisting of Aihole, Badami and Pattadakallu ತಾಣವನ್ನು ಅಂತಿಮ ಪಟ್ಟಿಗೆ ಸೇರ್ಪಡೆ ಮಾಡುವ ಸಲುವಾಗಿ ಡೋಸಿಯಾರ್ ಹಾಗೂ ಮ್ಯಾನೆಜ್‌ಮೆಂಟ್ ಪ್ಲಾನ್‌ನ್ನು ಇನ್‌ಟ್ಯಾಕ್ ಸಂಸ್ಥೆಯ ವತಿಯಿಂದ ಸಿದ್ಧಪಡಿಸುವುದು. | 2891000 |
| 6 | ತುಮಕೂರು ಜಿಲ್ಲೆ ತಿಪಟೂರು ತಾಲ್ಲೂಕು ಅರಳುಗುಪ್ಪೆ ಗ್ರಾಮದ ಕಲ್ಲೇಶ್ವರ ದೇವಸ್ಥಾನದ ಸಂರಕ್ಷಣಾ ಕಾಮಗಾರಿ (1ನೇ ಹಂತ) | 1872313 |

## ಲೆಕ್ಕಶೀರ್ಷಿಕೆ: 2205–00–103–0–25 ಸಂಸ್ಕೃತಿ ಸಂಗ್ರಹಾಲಯ

| | | |
|---|---|---|
| 1 | ಧಾರವಾಡ ನಗರದಲ್ಲಿರುವ ಪಾರಂಪರಿಕ ಲಿಂಗಾಯಿತ ನಗರಭವನದ ಜೀರ್ಣೋದ್ಧಾರ ಹಾಗೂ ನವೀಕರಿಸುವುದು. | 2063376 |

## ಲೆಕ್ಕಶೀರ್ಷಿಕೆ:2205–00–107–0–01 ಸರ್ಕಾರಿ ವಸ್ತು ಸಂಗ್ರಹಾಲಯಗಳು

| | | |
|---|---|---|
| 1 | ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕು ಕಿತ್ತೂರಿನಲ್ಲಿರುವ ಸರ್ಕಾರಿ ವಸ್ತು ಸಂಗ್ರಹಾಲಯಕ್ಕೆ ಉದ್ಯಾನವನ ನಿರ್ವಹಣೆ ಮತ್ತು ಅಭಿವೃದ್ಧಿ ಹಾಗೂ ಶುದ್ಧ ಕುಡಿಯುವ ನೀರಿನ ಘಟಕ, ಅಗ್ನಿ ನಿರೋಧಕ, ಸಿಸಿ ಕ್ಯಾಮರಾ ಅಳವಡಿಸುವುದು, ನಾಮ ಫಲಕ ಮತ್ತು ಸೂಚನಾ ಫಲಕಗಳನ್ನು ಅಳವಡಿಸುವ ಕಾಮಗಾರಿ | 242081 |
| 2 | ಬೆಂಗಳೂರು ವಸ್ತುಸಂಗ್ರಹಾಲಯ ಮತ್ತು ವೆಂಕಟಪ್ಪ ಚಿತ್ರಶಾಲೆಯಲ್ಲಿರುವ ವರ್ಣ ಚಿತ್ರಗಳ ಸಂರಕ್ಷಣೆ, ಇಂಟ್ಯಾಕ್ ಚಿತ್ರಕಲಾ ಪರಿಷತ್‌ರವರ ಮೂಲಕ. | 816103 |

| | | |
|---|---|---|
| 3 | ಬೆಂಗಳೂರು ಕಸ್ತೂರಿ ಬಾ ರಸ್ತೆಯಲ್ಲಿರುವ ಸರ್ಕಾರಿ ವಸ್ತು ಸಂಗ್ರಹಾಲಯ ಮತ್ತು ವೆಂಕಟಪ್ಪ ಚಿತ್ರಶಾಲೆಯಲ್ಲಿರುವ ಉದ್ಯಾನವನ ನಿರ್ಮಾಣ ಹಾಗೂ ಕೊಳದ ಸ್ವಚ್ಛತೆ. | 197736 |
| 4 | ಮೈಸೂರಿನ ಕೇಂದ್ರ ಕಛೇರಿಯ ಉದ್ಯಾನವನ ನಿರ್ವಹಣೆ ಹಾಗೂ ಅಭಿವೃದ್ಧಿ ಕಾಮಗಾರಿ | 196714 |

**ಲೆಕ್ಕಶೀರ್ಷಿಕೆ: 4202–04–101–0–02 139 ಪ್ರಧಾನ ಕಾಮಗಾರಿಗಳು**

| | | |
|---|---|---|
| 1 | ಹಾಸನ ವಸ್ತುಸಂಗ್ರಹಾಲಯದ 2ನೇ ಅಂತಸ್ತಿನ ಕಟ್ಟಡ ನಿರ್ಮಾಣ. | 7500 |
| 2 | ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕು ಬೆಳಗಲಿ ಗ್ರಾಮದಲ್ಲಿ ಇಲಾಖಾ ವತಿಯಿಂದ ಸಂರಕ್ಷಿಸಿರುವ ಶ್ರೀ ಜೋಡಿ ಆಂಜನೇಯ ದೇವಾಲಯದ ಮುಂಭಾಗ ಗರುಡುಗಂಭ ಹಾಗೂ ಬಲಿಪೀಠ ಸಂರಕ್ಷಣೆ ಹಾಗೂ ದೇವಾಲಯದ ಸುತ್ತಲೂ ನೆಲಹಾಸು ಕೆಲಸ. | 1878248 |
| 3 | ಬಿಜಾಪೂರ ಜಿಲ್ಲೆ, ಬಿಜಾಪೂರ ತಾಲ್ಲೂಕು, ಶಿವಣಗಿಯಲ್ಲಿರುವ ನೂಲಿ ಚಂದಯ್ಯ ಸ್ಮಾರಕ ಸಂರಕ್ಷಣಾ ಕಾಮಗಾರಿ. | 5505 |
| 4 | ಬಿಜಾಪೂರ ಜಿಲ್ಲೆ, ಬಿಜಾಪೂರ ತಾಲ್ಲೂಕು, ಕಾಖಂಡಕಿಯಲ್ಲಿರುವ ಶ್ರೀ ಹರಳಯ್ಯ ಸ್ಮಾರಕದ ಸಂರಕ್ಷಣಾ ಕಾಮಗಾರಿ. | 1407357 |
| 5 | ಬಿಜಾಪುರ ಜಿಲ್ಲೆ ಸಿಂದಗಿ ತಾಲ್ಲೂಕು ಕುರುಬತಳ್ಳಿ ಗ್ರಾಮದಲ್ಲಿರುವ ಮಾದರಕೇರಿಯ ಶ್ರೀ ಚಂದ್ರವ್ವತಾಯಿ ದೇವಾಲಯದ ಅಭಿವೃದ್ಧಿ ಕಾಮಗಾರಿ. | 206105 |
| 6 | ಬಿಜಾಪುರ ಜಿಲ್ಲೆ ಇಂಡಿ ತಾಲ್ಲೂಕು ಹಲಸಂಗಿ ಗ್ರಾಮದಲ್ಲಿರುವ ಶ್ರೀ ಪ್ರಭುಲಿಂಗ ದೇವಾಲಯದ ಅಭಿವೃದ್ಧಿ ಕಾಮಗಾರಿ. | 210055 |
| 7 | ಬಿಜಾಪುರ ಜಿಲ್ಲೆ ಬಿಜಾಪುರ ತಾಲ್ಲೂಕು ಡೊಮ್ಮನಾಳ ಗ್ರಾಮದಲ್ಲಿರುವ ಶ್ರೀ ಬೀರಲಿಂಗೇಶ್ವರ ದೇವಾಲಯದ ಅಭಿವೃದ್ಧಿ ಕಾಮಗಾರಿ. | 477618 |
| 8 | ಬೆಳಗಾವಿ ಜಿಲ್ಲೆ ಅಥಣಿ ತಾಲ್ಲೂಕು ನಂದಗಾಂವ ಗ್ರಾಮದಲ್ಲಿರುವ ಪುರಾತನ ದೇವಾಲಯದ ಅಭಿವೃದ್ಧಿ ಕಾಮಗಾರಿ. | 61341 |
| 9 | ಮಂಗಳೂರು ಸರ್ಕಾರಿ ವಸ್ತುಸಂಗ್ರಹಾಲಯದ ಮಳೆಯಿಂದ ಕುಸಿತಗೊಂಡ ಸುತ್ತುಗೋಡೆಯ ಮರು ನಿರ್ಮಾಣ ಕಾಮಗಾರಿ. | 800000 |

## 11 ಪ್ರವಾಸೋದ್ಯಮ ಇಲಾಖೆ :

ಪ್ರವಾಸೋದ್ಯಮ ಇಲಾಖೆಯಿಂದ ಜನವರಿ–2021ರ ಅಂತ್ಯಕ್ಕೆ ಖಜಾನೆ–2ರಲ್ಲಿ ರೂ.5,69,00,000/–ಗಳು ಹಾಗೂ ಧನಾದೇಶಗಳ ಮೂಲಕ ಪಿಡಿ ಖಾತೆಗೆ ರೂ.1,49,65,300/–ಗಳ ಅನುದಾನ ಬಿಡುಗಡೆಯಾಗಿದ್ದು, ಅದರಲ್ಲಿ ಒಟ್ಟು ರೂ.42,04,292/–ಗಳ ಅನುದಾನವನ್ನು ಈ ಕೆಳಕಂಡ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ವೆಚ್ಚ ಮಾಡಲಾಗಿದೆ. ಇನ್ನುಳಿದಂತೆ, ಕಾಮಗಾರಿಗಳು ಪ್ರಗತಿಯಲ್ಲಿದ್ದು, ಮಾರ್ಚ್–2021ರ ಅಂತ್ಯಕ್ಕೆ ಪೂರ್ಣಪ್ರಮಾಣದಲ್ಲಿ ವೆಚ್ಚಮಾಡಲಾಗುವುದು.

| ಕ್ರ ಸಂ | ಕಾಮಗಾರಿ ಹೆಸರು | 2020–21ನೇ ಸಾಲಿನಲ್ಲಿ ಮಾಡಲಾಗಿರುವ ವೆಚ್ಚ |
|---|---|---|
| 1 | ಮಂಡ್ಯ ಜಿಲ್ಲೆ, ಪಾಂಡವಪುರ ತಾಲ್ಲೂಕು, ಚಿನಕುರಳಿಯಲ್ಲಿರುವ ಶ್ರೀ ರಾಮೇಶ್ವರ ದೇವಾಲಯದ ಸಂರಕ್ಷಣಾ ಕಾಮಗಾರಿ. | 980000 |
| 2 | ಮಂಡ್ಯ ಜಿಲ್ಲೆ, ಪಾಂಡವಪುರ ತಾಲ್ಲೂಕು, ಗುಮ್ಮನಹಳ್ಳಿಯಲ್ಲಿರುವ ಶ್ರೀ ಸಪ್ತಮಾತೃಕೆ ದೇವೀರಮ್ಮ ದೇವಾಲಯದ ಸಂರಕ್ಷಣಾ ಕಾಮಗಾರಿ. (ಪಿಡಿ ಖಾತೆ) | 1869000 |

| | | |
|---|---|---|
| 3 | ಮಂಡ್ಯ ಜಿಲ್ಲೆ, ಪಾಂಡವಪುರ ತಾಲ್ಲೂಕು, ಚಿನಕುರಳಿಯಲ್ಲಿರುವ ಶ್ರೀ ಅಭಯ ಆಂಜನೇಯ ಸ್ವಾಮಿ ದೇವಾಲಯದ ಸಂರಕ್ಷಣಾ ಕಾಮಗಾರಿ. | 726300 |
| 4 | ಮೈಸೂರು ಜಿಲ್ಲೆ ಕೆ.ಆರ್.ನಗರ ತಾಲ್ಲೂಕು, ಮಿರ್ಲೆ ಹೋಬಳಿ ಮಿರ್ಲೆ ಗ್ರಾಮದ ಶ್ರೀ ವಿರೂಪಾಕ್ಷೇಶ್ವರ ದೇವಸ್ಥಾನದ ಅಭಿವೃದ್ಧಿ ಕಾಮಗಾರಿ. | 628992 |

**12. ವಿಶ್ವ ಪರಂಪರೆ ಸಪ್ತಾಹ :**

ಇಲಾಖಾವತಿಯಿಂದ **"ವಿಶ್ವ ಪರಂಪರೆ ಸಪ್ತಾಹ"**ದ ಅಂಗವಾಗಿ **ದಿನಾಂಕ:24.11.2020ರಂದು** ಪುರಭವನದ ಆವರಣದಿಂದ ಪಾರಂಪರಿಕ ನಡಿಗೆಯನ್ನು ಆಯೋಜಿಸಲಾಗಿತ್ತು. ಸದರಿ ನಡಿಗೆಯಲ್ಲಿ ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜಿನ ವಿದ್ಯಾರ್ಥಿಗಳು ಹಾಗೂ ರಂಗಾಯಣ ವಿದ್ಯಾರ್ಥಿಗಳು ಭಾಗವಹಿಸಿದ್ದರು.

13. ದಸರಾ-2020ರ ಅಂಗವಾಗಿ ದಿನಾಂಕ:26.10.2020ರಂದು ಮಾನ್ಯ ಪ್ರವಾಸೋದ್ಯಮ ಸಚಿವರು, ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ ಜರುಗಿದ ಕಾರ್ಯಕ್ರಮದಲ್ಲಿ ಇಲಾಖಾವತಿಯಿಂದ ಹೊರತರಲಾಗಿರುವ ಈ ಕೆಳಕಂಡ 05 ಆಂಗ್ಲ ಅವತರಿಣಿಕೆಯ ಪುಸ್ತಕಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.

1. Karnataka A Garden of Architechture.
2. Buddhist Art and Culture in Karnataka - India.
3. Mysuru Dasara The State Festival.
4. Hampi The Splendor that was.
5. Archaeological Excavations at Talakadu Vol-2.

**14. ಮಾಹಿತಿ ಹಕ್ಕು ಅಧಿನಿಯಮ:**

**2020–21ನೇ ಸಾಲಿನಲ್ಲಿ ಮಾಹಿತಿ ಹಕ್ಕು ಅಧಿನಿಯಮದಡಿ ಸ್ವೀಕೃತವಾದ ಅರ್ಜಿಗಳ ವಿವರ**

| ವರ್ಷ | ನೇರವಾಗಿ ಸ್ವೀಕೃತವಾದ ಅರ್ಜಿಗಳು | ಸರ್ಕಾರದಿಂದ ವರ್ಗಾಹಿಸಿರುವ ಅರ್ಜಿಗಳು | ಅಧೀನ ಕಛೇರಿಯಿಂದ ವರ್ಗಾಹಿಸಿದ ಅರ್ಜಿಗಳು | ಅಧೀನ ಕಛೇರಿಯಲ್ಲಿ ನೇರವಾಗಿ ಮಾಹಿತಿ ನೀಡಿರುವ ಪತ್ರದ ಪ್ರತಿಗಳು | ಒಟ್ಟು ಸ್ವೀಕೃತವಾದ ಅರ್ಜಿಗಳು |
|---|---|---|---|---|---|
| ಏಪ್ರಿಲ್ 2020 ರಿಂದ ಫೆಬ್ರವರಿ 2021 | 62 | 7 | 14 | 6 | **89** |

**15. ಸಾರ್ವಜನಿಕ ಸಹಭಾಗಿತ್ವ ಯೋಜನೆಯಡಿ ಸ್ಮಾರಕಗಳ ಸಂರಕ್ಷಣೆ**

- ಸರ್ಕಾರಿ ಆದೇಶ ಸಂಖ್ಯೆ: ಸಂಕಇ 97ಕೆಎಂಯು 2001, ದಿನಾಂಕ 19/11/2001ರನ್ವಯ 2002-03ನೇ ಸಾಲಿನಿಂದ ಸಾರ್ವಜನಿಕ ಸಹಭಾಗಿತ್ವ ಯೋಜನೆಯಡಿ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಸಹಯೋಗದೊಡನೆ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಧರ್ಮೋತ್ಥಾನ ಟ್ರಸ್ಟ್‌ವತಿಯಿಂದ

ಸ್ಮಾರಕಗಳ ಸಂರಕ್ಷಣೆಯನ್ನು ಕೈಗೊಂಡು ಬರಲಾಗುತ್ತಿದೆ. ಈ ಯೋಜನೆಯಡಿ ಅಂದಾಜುವೆಚ್ಚ 40:40:20 ಅನುಪಾತದಲ್ಲಿ (ಸರ್ಕಾರ:ಖಾಸಗಿ:ಸಾರ್ವಜನಿಕ) ಭರಿಸಲಾಗುತ್ತಿದೆ.

- ಈ ಯೋಜನೆಯಡಿ 2019-20ನೇ ಸಾಲಿನಲ್ಲಿ 16 ಸಂರಕ್ಷಣಾ ಕಾಮಗಾರಿಗಳ ಕ್ರಿಯಾಯೋಜನೆಗೆ ಸರ್ಕಾರದ ಅನುಮೋದನೆಯನ್ನು ಪಡೆದು ಮೊದಲನೇ ಕಂತಾಗಿ ರೂ.80.00ಲಕ್ಷಗಳ ಅನುದಾನವನ್ನು ಬಿಡುಗಡೆಗೊಳಿಸಲಾಗಿದೆ.

- ಈ ಮೇಲ್ಕಂಡ ಯೋಜನೆಯಡಿ ಈವರೆವಿಗೆ ಒಟ್ಟು 186 ದೇವಾಲಯ/ಸ್ಮಾರಕಗಳ ಜೀರ್ಣೋದ್ಧಾರ ಕಾರ್ಯವನ್ನು ರೂ.22.01ಕೋಟಿಗಳ ವೆಚ್ಚದಲ್ಲಿ ಕೈಗೊಂಡಿದ್ದು, ಅದರಲ್ಲಿ 170 ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದು, ಇನ್ನುಳಿದ 16 ಕಾಮಗಾರಿಗಳು ಪ್ರಗತಿಯಲ್ಲಿವೆ. ಈ ಕಾಮಗಾರಿಗೆ ಈವರೆವಿಗೆ ಸರ್ಕಾರದಿಂದ ಶೇ.40%ರ ಅನುಪಾತದಡಿ ರೂ.880.52ಲಕ್ಷಗಳನ್ನು ಬಿಡುಗಡೆಗೊಳಿಸಲಾಗಿದೆ. ಇನ್ನುಳಿದ ರೂ.13.30ಕೋಟಿಗಳನ್ನು ಶ್ರೀ ಧರ್ಮಸ್ಥಳ ಟ್ರಸ್ಟ್ ಮತ್ತು ದೇವಾಲಯದ ಸಮಿತಿಯ ವತಿಯಿಂದ ಭರಿಸುತ್ತಾರೆ.

**16. ಬಾಹ್ಯ ಸಂಸ್ಥೆಯ ಮೂಲಕ ಅಗತ್ಯ ಸಿಬ್ಬಂದಿಯನ್ನು ನೇಮಕ ಮಾಡಿಕೊಂಡಿರುವುದು:–**

ಈ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ರಾಜ್ಯ ಸಂರಕ್ಷಿತ ಸ್ಮಾರಕಗಳಿಗೆ ಹಾಗೂ ವಸ್ತುಸಂಗ್ರಹಾಲಯಗಳಿಗೆ ಭದ್ರತಾ ಸಿಬ್ಬಂದಿಯನ್ನು KTTP ನಿಯಮಾನುಸಾರ ಟೆಂಡರ್ ಕರೆದು ಬಾಹ್ಯ ಸಂಸ್ಥೆಯ ಮೂಲಕ ನೇಮಕ ಮಾಡಿಕೊಳ್ಳಲಾಗಿದೆ. ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ ಕಛೇರಿ ಕೆಲಸ ಕಾರ್ಯಗಳಿಗೆ ನಿಯಮಾನುಸಾರ ಈ ಕೆಳಕಂಡ ಸಿಬ್ಬಂದಿಗಳ ಸೇವೆಯನ್ನು ಬಾಹ್ಯ ಸಂಸ್ಥೆಯ ಮೂಲಕ ಪಡೆಯಲಾಗುತ್ತಿದೆ.

| ಕ್ರ.ಸಂ | ಬಾಹ್ಯ ಮೂಲದಿಂದ ಪಡೆದ ಸಿಬ್ಬಂದಿಯ ಪದನಾಮ | ವೃಂದ | ಹುದ್ದೆಗಳ ಸಂಖ್ಯೆ |
|---|---|---|---|
| 1 | ಪುರಾತತ್ವ ಸಂರಕ್ಷಣಾ ಸಹಾಯಕರು | ಸಿ | 01 |
| 2 | ದ್ವಿತೀಯ ದರ್ಜೆ ಸಹಾಯಕರು | ಸಿ | 04 |
| 3 | ಬೆರಳಚ್ಚುಗಾರರು | ಸಿ | 03 |
| 4 | ವಾಹನ ಚಾಲಕರು | ಸಿ | 02 |
| 5 | ಗ್ರೂಪ್–ಡಿ | ಡಿ | 74 |
| | | **ಒಟ್ಟು** | **84** |

**17. ಸಹಾಯಾನುದಾನ:**

- **ಹಂಪಿ ಅಭಿವೃದ್ಧಿ ಪ್ರದೇಶ ನಿರ್ವಹಣಾ ಪ್ರಾಧಿಕಾರದ ನಿರ್ವಹಣೆ:**

  2020–21ನೇ ಆರ್ಥಿಕ ಸಾಲಿನಲ್ಲಿ ಹಂಪಿ ಅಭಿವೃದ್ಧಿ ಪ್ರದೇಶ ನಿರ್ವಹಣಾ ಪ್ರಾಧಿಕಾರದ ನಿರ್ವಹಣೆಗೆ ರೂ.42.58ಲಕ್ಷವನ್ನು ಸರ್ಕಾರಿ ಆದೇಶದ ಮೇರೆಗೆ ಸಹಾಯಾನುದಾನವನ್ನು ಬಿಡುಗಡೆ ಮಾಡಲಾಗಿದೆ.

- **ಚಾಲುಕ್ಯ ಪಾರಂಪರಿಕ ಅಭಿವೃದ್ಧಿ ಪ್ರಾಧಿಕಾರದ ನಿರ್ವಹಣೆ:**

  2020–21ನೇ ಆರ್ಥಿಕ ಸಾಲಿನಲ್ಲಿ ಚಾಲುಕ್ಯ ಅಭಿವೃದ್ಧಿ ಪ್ರಾಧಿಕಾರದ ಕಾರ್ಯಕ್ರಮಕ್ಕೆ ರೂ.1.00ಲಕ್ಷಗಳನ್ನು ಸರ್ಕಾರಿ ಮಂಜೂರಾತಿ ಆದೇಶದನ್ವಯ ಬಿಡುಗಡೆ ಮಾಡಲಾಗಿದೆ.

- **ಲಕ್ಕುಂಡಿ ಅಭಿವೃದ್ಧಿ ಪ್ರಾಧಿಕಾರ:**

  2017–18 ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಲಕ್ಕುಂಡಿ ಅಭಿವೃದ್ಧಿ ಪ್ರಾಧಿಕಾರದ ಘೋಷಣೆಯಾಗಿದ್ದು, ಅದರಂತೆ ಪ್ರಾಧಿಕಾರದ ವಿದೇಯಕಕ್ಕೆ ಅನುಮೋದನೆಯನ್ನು ಪಡೆದು ಸರ್ಕಾರಿ ಆದೇಶ ಸಂಖ್ಯೆ TOR 91 TDA 2020 22.12.2020ರನ್ವಯ ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧಿನಿಯಮ 2020 ರಚಿಸಿ ದಿನಾಂಕ:21.12.2020ರಿಂದ ಜಾರಿಗೊಳಿಸಲಾಗಿರುತ್ತದೆ.

**18. ಲೆಕ್ಕ ಪರಿಶೋಧನೆಗೆ ಸಂಬಂಧಿಸಿದಂತೆ ಕಛೇರಿವಾರು ಬಾಕಿ ಇರುವ ಕಂಡಿಕೆಗಳ ವರದಿ:**

ಈ ಇಲಾಖೆಯಲ್ಲಿ ಪ್ರಸ್ತುತ **41 ಆಡಿಟ್** ಪ್ಯಾರಾಗಳು ಬಾಕಿ ಇವೆ. ಈ ಆಡಿಟ್ ಪ್ಯಾರಾಗಳಿಗೆ ಕಂಡಿಕೆವಾರು ಉತ್ತರವನ್ನು ನೀಡಲಾಗಿದೆ. 2017–18ನೇ ಸಾಲಿನವರೆಗೆ ಇಲಾಖೆಯ ಲೆಕ್ಕಪರಿಶೋಧನೆ ಪೂರ್ಣಗೊಂಡಿರುತ್ತದೆ.

**19. ಇಲಾಖೆಯ ವೆಬ್‌ಸೈಟ್:**

ಇಲಾಖೆಯ ವೆಬ್‌ಸೈಟ್‌ನಲ್ಲಿ (www.karnatakaarchaeology.gov.in) ಇಲಾಖೆಯ ಇತಿಹಾಸ, ಇಲಾಖೆಯ ಪ್ರಮುಖ ಚಟುವಟಿಕೆಗಳು ಹಾಗೂ ಸಾಧಿಸಿದ ಪ್ರಗತಿಯ ವಿವರಗಳು, ವಾರ್ಷಿಕ ವರದಿಗಳು, ಇಲಾಖೆಯ ಅಧಿನಿಯಮ ಮತ್ತು ಉಪ ನಿಯಮಗಳ ವಿವರ, ಇಲಾಖೆಯ ಪ್ರಕಟಣೆಯ ವಿವರಗಳು, ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿತ ಮಾಹಿತಿ ಹಕ್ಕು ಅಧಿನಿಯಮ 4 (1)ಎ ಮತ್ತು 4(1) ಬಿ, ಇಲಾಖೆಯ ಸಂರಕ್ಷಿತ ಸ್ಮಾರಕಗಳ ನಿರ್ದೇಶಿಕೆ ಮತ್ತು ಈ ಸ್ಮಾರಕಗಳ ಸಂಕ್ಷಿಪ್ತ ವಿವರಗಳನ್ನೊಳಗೊಂಡ ಮಾಹಿತಿ, ಇಲಾಖೆಯ ಪ್ರಮುಖ ವಿದ್ಯಮಾನಗಳು (News & Events), ಟೆಂಡರ್‌ಗಳ ಕುರಿತು ಮಾಹಿತಿ, ಸಾರ್ವಜನಿಕ ಆಕ್ಷೇಪಣೆ ಮತ್ತು ಮಾಹಿತಿಗಾಗಿ Query ಸಲ್ಲಿಸಬಹುದಾಗಿದೆ.

**20. ಇಲಾಖೆಯ ಗ್ರಂಥಾಲಯ:–**

ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು ವತಿಯಿಂದ ಮೈಸೂರಿನ ಅರಮನೆಯ ಆವರಣದಲ್ಲಿ ಒಂದು ಗ್ರಂಥಾಲಯವಿದ್ದು, ಈ ಗ್ರಂಥಾಲಯದಲ್ಲಿ ಪುರಾತತ್ವ, ಇತಿಹಾಸ ವಿಷಯಗಳ ಕುರಿತಂತೆ ಒಂದು ಪುಸ್ತಕ ಬಂಡಾರವಿದ್ದು, ಸುಮಾರು 18398 ಪುಸ್ತಕಗಳನ್ನು

ಸಂಗ್ರಹಿಸಲಾಗಿದೆ. ಈ ಗ್ರಂಥಾಲಯಕ್ಕೆ ಬರುವ ವಿದ್ವಾಂಸರಿಗೆ, ಸಂಶೋಧಕರಿಗೆ ಮತ್ತು ಸಾರ್ವಜನಿಕರಿಗೆ ಮುಕ್ತ ಪ್ರವೇಶವಿದೆ. ಆಸಕ್ತರು ಇದರ ಉಪಯೋಗವನ್ನು ಪಡೆಯುತ್ತಿದ್ದಾರೆ.

**21. 2020-21ನೇ ಸಾಲಿನಲ್ಲಿ ವಿಧಾನಸಭೆ/ ವಿಧಾನ ಪರಿಷತ್/ ಭರವಸೆ/ ಲೋಕಸಭಾ ಪ್ರಶ್ನೆ ಇವುಗಳಿಗೆ ಸಂಬಂಧಿಸಿದ ವಿವರಗಳು:**

| ಕ್ರಮ ಸಂ. | ವಿಷಯ | ವಿಧಾನ ಸಭೆ | ವಿಧಾನ ಪರಿಷತ್ | ಗಮನ ಸೆಳೆಯುವ ಸೂಚನೆಗಳು | ಭರವಸೆ | | ಲೋಕಸಭಾ ಪ್ರಶ್ನೆ | ರಾಜ್ಯಸಭೆ |
|---|---|---|---|---|---|---|---|---|
| | | | | | ವಿಧಾನ ಸಭೆ | ವಿಧಾನ ಪರಿಷತ್ | | |
| 1) | ಆಡಳಿತಾತ್ಮಕ ವಿಷಯಗಳು | 12 | 09 | 00 | 00 | 00 | 00 | 00 |
| 2) | ವಸ್ತು ಸಂಗ್ರಹಾಲಯ ಕುರಿತಂತೆ | 01 | 03 | 00 | 00 | 00 | 00 | 00 |
| 3) | ಸಂರಕ್ಷಣಾ ವಿಷಯಗಳು | 13 | 03 | 00 | 01 | 02 | – | –– |
| 4) | ಪರಂಪರೆ ವಿಭಾಗ | – | – | – | – | – | – | – |
| 5) | ಆಯವ್ಯಯ ವಿಭಾಗ | – | – | – | – | – | – | – |
| | **ಒಟ್ಟು** | **26** | **15** | **00** | **01** | **02** | **00** | **00** |

*** ಸಂರಕ್ಷಣಾ ವಿಷಯಗಳ ವಿಧಾನಸಭೆ ಭರವಸೆಗಳ 08ರ ಪೈಕಿ 07 ಇತ್ಯರ್ಥಗೊಂಡಿರುತ್ತವೆ.**

**22. ಇಲಾಖೆಯಲ್ಲಿ ಅಧಿಕಾರಿ ಹಾಗೂ ಸಿಬ್ಬಂದಿಗಳು ಪಡೆದ ತರಬೇತಿಗಳ ವಿವರಗಳು:**

2020-21ನೇ ಸಾಲಿನಲ್ಲಿ ತರಬೇತಿಗಳ ವಿವರ ಇಂತಿವೆ.

| ಕ್ರ.ಸಂ. | ತರಬೇತಿ ವಿಷಯ ಮತ್ತು ಸ್ಥಳ ಮತ್ತು ದಿನಾಂಕ | ನಿಯೋಜಿಸಿರುವ ಅಧಿಕಾರಿಗಳ ಸಂಖ್ಯೆ | ನಿಯೋಜಿಸಿರುವ ಸಿಬ್ಬಂದಿಗಳ ಸಂಖ್ಯೆ |
|---|---|---|---|
| 1) | ಹೆಚ್.ಆರ್.ಎಂ.ಎಸ್.01 | 00 | 02 |

**23. ನಿವೃತ್ತಿ:**

2020-21ನೇ ಸಾಲಿನಲ್ಲಿ ಗ್ರೂಪ್ ಎ ವೃಂದದ 01 ಅಧಿಕಾರಿ ಹಾಗೂ ಗ್ರೂಪ್ 'ಡಿ' -03 ಸಿಬ್ಬಂದಿಗಳು ವಯೋಮಾನ ನಿವೃತ್ತಿಯನ್ನು ಹೊಂದಿರುತ್ತಾರೆ.

**24.** ನ್ಯಾಯಾಲಯದ ಪ್ರಕರಣಗಳ ವಿವರಗಳು:

| ಕ್ರ.ಸಂ | ನ್ಯಾಯಾಲಯದ ಪ್ರಕರಣಗಳು | 2019-20ನೇ ಸಾಲಿನಲ್ಲಿ ಬಾಕಿ ಇರುವ ಪ್ರಕರಣಗಳು | 2020-21ನೇ ಸಾಲಿನಲ್ಲಿ ದಾಖಲಾದ ಪ್ರಕರಣಗಳು | ಇತ್ಯರ್ಥವಾಗಿರುವ ಪ್ರಕರಣಗಳು | ಇತ್ಯರ್ಥ ಆಗಬೇಕಾದ ಪ್ರಕರಣಗಳು |
|---|---|---|---|---|---|
| 1 | ಸರ್ವೋಚ್ಚ ನ್ಯಾಯಾಲಯ, ನವದೆಹಲಿ (ಸುಪ್ರೀಮ್ ಕೋರ್ಟ್) | 03 | -- | -- | 03 |
| 2 | ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು, ಕಲಬುರಗಿ, ಧಾರವಾಡ (ಹೈಕೋರ್ಟ್) | 97 | -- | -- | 97 |
| 3 | ತಾಲ್ಲೂಕು ಮತ್ತು ಜಿಲ್ಲಾ ನ್ಯಾಯಾಲಯ | 07 | -- | 01 | 06 |
| 4 | ಜಿಲ್ಲಾಧಿಕಾರಿ/ವಕ್ಫ್‌ರವರ ನ್ಯಾಯಾಲಯ | 03 | -- | - | 03 |
| 5 | ಕರ್ನಾಟಕ ಆಡಳಿತ ನ್ಯಾಯಮಂಡಳಿ, ಬೆಂಗಳೂರು | 02 | - | -- | 02 |
| | **ಒಟ್ಟು** | **112** | -- | **01** | **111** |

25. **ಸಂರಕ್ಷಣಾ ಕಾಮಗಾರಿ**

| **ಕ್ರ.ಸಂ** | **ಮುಂದುವರೆದ ಕಾಮಗಾರಿ ಸಂಖ್ಯೆ** | **ಹೊಸ ಕಾಮಗಾರಿ ಸಂಖ್ಯೆ** | **ಒಟ್ಟು** | **ಮುಕ್ತಾಯಗೊಂಡಿರುವ ಸಂರಕ್ಷಣಾ ಕಾಮಗಾರಿಗಳ ಸಂಖ್ಯೆ** | **ಮುಂದುವರೆದ ಕಾಮಗಾರಿಗಳ ಸಂಖ್ಯೆ** |
|---|---|---|---|---|---|
| ರಾಜ್ಯ ಯೋಜನೆ | 35 | 35 | 70 | 27 | 43 |
| ಪ್ರವಾಸೋದ್ಯಮ | 46 | 11 | 57 | 5 | 51 |

- 2020-21ನೇ ಸಾಲಿನಲ್ಲಿ ರಾಜ್ಯ ಯೋಜನೆಯಡಿ ವಿವಿಧ ಶೀರ್ಷಿಕೆಯಡಿ ಮುಂದುವರೆದ ಕಾಮಗಾರಿಗಳು ಸೇರಿದಂತೆ ಒಟ್ಟಾರೆ 70 ಕಾಮಗಾರಿಯನ್ನು ಅನುಷ್ಠಾನಗೊಳಿಸಲಾಗದ್ದು, ಇದರಲ್ಲಿ 27 ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದು, ಇನ್ನು 43 ಕಾಮಗಾರಿಗಳು ಪ್ರಗತಿಯಲ್ಲಿವೆ.

- 2020-21ನೇ ಸಾಲಿನಲ್ಲಿ ಪ್ರವಾಸೋದ್ಯಮ ಇಲಾಖೆಯ ಅನುದಾನದಡಿ ಒಟ್ಟಾರೆ 57 ಸ್ಮಾರಕಗಳ ಸಂರಕ್ಷಣಾ ಕಾಮಗಾರಿಯನ್ನು ಅನುಷ್ಠಾನಗೊಳಿಸಲಾಗದ್ದು, ಇದರಲ್ಲಿ 5 ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದು, ಇನ್ನು 51 ಕಾಮಗಾರಿಗಳು ಪ್ರಗತಿಯಲ್ಲಿವೆ.

26. **ಸಂರಕ್ಷಣಾ ಯೋಜನೆ**

- 2020-21ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 253ರಲ್ಲಿ ರಾಜ್ಯದಲ್ಲಿ ಐತಿಹಾಸಿಕ ಮಹತ್ವವುಳ್ಳ ದೇವಾಲಯಗಳು, ಪ್ರಾಚೀನ ಸ್ಥಳಗಳು/ ಸ್ಮಾರಕಗಳಿದ್ದು, ಇವುಗಳನ್ನು ಹಂತ ಹಂತವಾಗಿ ಸಂರಕ್ಷಿಸಿ ಪುನರುಜೀವನಗೊಳಿಸಲು ಸಂರಕ್ಷಣಾ ಯೋಜನೆಯನ್ನು ಘೋಷಿಸಲಾಗಿದೆ. ಈ ಕಾರ್ಯಕ್ಕಾಗಿ ದಿನಾಂಕ 05.01.2021ರಂದು ಸರ್ಕಾರದ ತಾತ್ವಿಕ ಅನುಮೋದನೆ ನೀಡಲಾಗಿದೆ. ಇದಕ್ಕೆ ಆಯವ್ಯಯದಲ್ಲಿ ಅನುದಾನ ಘೋಷಣೆಯಾಗಿರುವುದಿಲ್ಲ.

- ಪ್ರಸಕ್ತ ಆರ್ಥಿಕ ಸಾಲಿನಲ್ಲಿ ರೂ.10.00ಲಕ್ಷಗಳ ಅನುದಾನವನ್ನು ರಾಜ್ಯ ಕ್ರಿಯಾಯೋಜನೆಯಲ್ಲಿ ನಿಗದಿಪಡಿಸಿಕೊಂಡಿದ್ದು, ಇಲಾಖೆಯ ಸಿಬ್ಬಂದಿಗಳ ಮೂಲಕ ಚಿಕ್ಕಬಳ್ಳಾಪುರ, ಶಿಕಾರಿಪುರ, ಕಲ್ಬುರ್ಗಿ, ಹಾಸನ ಮತ್ತು ಕಿತ್ತೂರು ಈ 5 ತಾಲ್ಲೂಕುಗಳಲ್ಲಿ ಗ್ರಾಮವಾರು ಸಮೀಕ್ಷೆಯ ಮೂಲಕ ಸರ್ವೇ ಕಾರ್ಯವು ಪ್ರಗತಿಯಲ್ಲಿದೆ.

27. **ಯುನೆಸ್ಕೋ ವಿಶ್ವ ಪರಂಪರೆ ಪಟ್ಟಿಗೆ (UNESCO World Heritage Sites) ಕರ್ನಾಟಕ ನಾಲ್ಕು ತಾಣಗಳ ಸೇರ್ಪಡೆ ಕುರಿತು :**

- ಕರ್ನಾಟಕದಿಂದ ವಿಶ್ವ ಪರಂಪರೆ ತಾತ್ಕಾಲಿಕ ಪಟ್ಟಿಗೆ ಆಯ್ಕೆಗೊಂಡಿರುವ ಮೂರು ತಾಣಗಳನ್ನು ಅಂತಿಮಪಟ್ಟಿ ಸೇರ್ಪಡೆಗೆ ಡೋಸಿಯರ್ ಅನ್ನು ಸಿದ್ಧಪಡಿಸಿ ಸಲ್ಲಿಸಲಾಗಿದೆ. ಒಂದು ತಾಣದ ಕಾರ್ಯವು ಪ್ರಗತಿಯಲ್ಲಿದೆ.

- Monuments and forts of Deccan Sultanate – ವಿಶ್ವ ಪರಂಪರೆ ಅಂತಿಮ ಪಟ್ಟಿ ಸೇರ್ಪಡೆಗೆ ಡೋಸಿಯರ್ ಮತ್ತು ಸೈಟ್ ಮ್ಯಾನೇಜ್‌ಮೆಂಟ್ ಪ್ಲಾನ್‌ನ್ನು The Indian Heritge Cities Network Foundation, ಬೆಂಗಳೂರು ಇವರ ಮೂಲಕ ಸಿದ್ಧಪಡಿಸಿ ಭಾರತೀಯ ಪುರಾತತ್ವ ಸರ್ವೇಕ್ಷಣೆಯ ಮುಖಾಂತರ ವಿಶ್ವಪರಂಪರೆ ಪಟ್ಟಿಯ ಆಯ್ಕೆ ಸಮಿತಿಯ ಪರಿಶೀಲನೆಗೆ ಫೆಬ್ರುವರಿ 2020ರಲ್ಲಿ ಸಲ್ಲಿಸಲಾಗಿದೆ.

- Sacred Ensembles of the Hoysala (Hoysala Architecture series including Belur, Halebidu) : ವಿಶ್ವ ಪರಂಪರೆ ಅಂತಿಮ ಪಟ್ಟಿ ಸೇರ್ಪಡೆಗೆ ಡೋಸಿಯರ್ ಮತ್ತು ಸೈಟ್ ಮ್ಯಾನೇಜ್‌ಮೆಂಟ್ ಪ್ಲಾನ್‌ನ್ನು ಇನ್‌ಟ್ಯಾಕ್ ಸಂಸ್ಥೆಯ ಮೂಲಕ ರೂ.82.00ಲಕ್ಷಗಳ ಸಿದ್ಧಪಡಿಸಿ ಭಾರತೀಯ ಪುರಾತತ್ವ ಸರ್ವೇಕ್ಷಣೆಯ ಮುಖಾಂತರ ವಿಶ್ವಪರಂಪರೆ ಪಟ್ಟಿಯ ಆಯ್ಕೆ ಸಮಿತಿಯ ಪರಿಶೀಲನೆಗೆ ಜನವರಿ 2021ರಲ್ಲಿ ಸಲ್ಲಿಸಲಾಗಿದೆ.

- TEMPLE ARCHITECTURE (AIHOLE-BADAMI- PATTADAKAL) : ಐಹೊಳೆ, ಬಾದಾಮಿ ಮತ್ತು ಪಟ್ಟದಕಲ್ಲು ಪ್ರದೇಶದಲ್ಲಿನ ಸ್ಮಾರಕಗಳ ಸಮೂಹಗಳನ್ನು ವಿಶ್ವ ಪರಂಪರೆ ಅಂತಿಮ ಪಟ್ಟಿ ಸೇರ್ಪಡೆಗೆ The Indian Heritge Cities Network Foundation, ಬೆಂಗಳೂರು,ಇವರ ಸಹಯೋಗದೊಂದಿಗೆ ಡೋಸಿಯರ್ ಮತ್ತು ಸೈಟ್

ಮ್ಯಾನೇಜ್‌ಮೆಂಟ್ ಪ್ಲಾನ್‌ನ್ನು ರೂ.82.00ಲಕ್ಷಗಳ ಸಿದ್ಧಪಡಿಸಿ ಭಾರತೀಯ ಪುರಾತತ್ವ ಸರ್ವೇಕ್ಷಣೆಯ ಮುಖಾಂತರ ವಿಶ್ವಪರಂಪರೆ ಪಟ್ಟಿಯ ಆಯ್ಕೆ ಸಮಿತಿಯ ಪರಿಶೀಲನೆಗೆ ಜನವರಿ 2021ರಲ್ಲಿ ಸಲ್ಲಿಸಲಾಗಿದೆ

- Monuments of Srirangapatna Island Town (Srirangapatna) : ವಿಶ್ವ ಪರಂಪರೆ ಅಂತಿಮ ಪಟ್ಟಿ ಸೇರ್ಪಡೆಗೆ ಡೋಸಿಯರ್ ಮತ್ತು ಸೈಟ್ ಮ್ಯಾನೇಜ್‌ಮೆಂಟ್ ಪ್ಲಾನ್‌ನ್ನು ಇನ್‌ಟ್ಯಾಕ್ ಸಂಸ್ಥೆಯ ಮೂಲಕ ರೂ.64.00 ಲಕ್ಷಗಳಲ್ಲಿ ಸಿದ್ಧಪಡಿಸಲಾಗುತ್ತಿದೆ.

28. **ಆಯವ್ಯಯ ಘೋಷಣೆ ಕಾರ್ಯಕ್ರಮಗಳ ಅನುಷ್ಠಾನ 3ಡಿ ಮ್ಯಾಪಿಂಗ್ ಮತ್ತು ಲೇಸರ್ ಸ್ಕ್ಯಾನಿಂಗ್ ಮಾಡಿ ಡಿಜಿಟಲ್ ದಾಖಲೀಕರಣ.**

- 2019-20ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 309ರಲ್ಲಿ ಇಲಾಖೆಯ ಒಟ್ಟು 844 ಸಂರಕ್ಷಿತ ಸ್ಮಾರಕಗಳಲ್ಲಿ 600 ಸ್ಮಾರಕಗಳನ್ನು ಮುಂದಿನ ಐದು ವರ್ಷಗಳಲ್ಲಿ ಸಮೀಕ್ಷೆ ಮಾಡುವುದರೊಂದಗೆ ಈ ಸ್ಮಾರಕಗಳ ಸಂರಕ್ಷಣೆಯನ್ನು ಕೈಗೊಳ್ಳಲಾಗುವುದೆಂಬುದಾಗಿ ಘೋಷಣೆಯಾಗಿರುತ್ತದೆ.

- ಈ ಘೋಷಣೆಯನ್ವಯ ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ, ಬೆಂಗಳೂರು, ಇವರ ಮೂಲಕ ಇಲಾಖೆಯ ಒಟ್ಟಾರೆ 844 ಸ್ಮಾರಕಗಳ 3ಡಿ ಮ್ಯಾಪಿಂಗ್ ಮತ್ತು ಲೇಸರ್ ಸ್ಕ್ಯಾನಿಂಗ್ ಮಾಡಿ ಡಿಜಿಟಲ್ ದಾಖಲೀಕರಣ ಮಾಡುವ ಕಾರ್ಯಯೋಜನೆಗೆ ರೂ.64.91ಲಕ್ಷಗಳ ವೆಚ್ಚದಲ್ಲಿ ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ, ಬೆಂಗಳೂರು ಇವರೊಡನೆ ದಿನಾಂಕ:04.10.2019ರಂದು ಒಡಂಬಡಿಕೆಗೆ ಉಭಯತ್ರರು ಸಹಿ ಮಾಡುವುದರೊಂದಿಗೆ ಕಾರ್ಯಕ್ರಮಕ್ಕೆ ಚಾಲನೆಯನ್ನು ನೀಡಲಾಗಿದೆ.

- 2019-20ನೇ ಸಾಲಿನಲ್ಲಿ ಬೆಂಗಳೂರು ವಿಭಾಗದ 105 ಸ್ಮಾರಕಗಳ 3ಡಿ ಮ್ಯಾಪಿಂಗ್ ಮತ್ತು ಲೇಸರ್ ಸ್ಕ್ಯಾನಿಂಗ್ ಪೂರ್ಣಗೊಂಡಿದೆ.

- 2020-21ನೇ ಸಾಲಿನಲ್ಲಿ ಮೈಸೂರು ವಿಭಾಗದ 125 ಸ್ಮಾರಕಗಳ 3ಡಿ ಮ್ಯಾಪಿಂಗ್ ಮತ್ತು ಲೇಸರ್ ಸ್ಕ್ಯಾನಿಂಗ್ ಪ್ರಗತಿಯಲ್ಲಿದೆ.

ಈ ರೀತಿ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಕಾರ್ಯಚಟುವಟಿಕೆಗಳು ಮುಂದುವರಿಯುತ್ತಿವೆ.

(ಪೂರ್ಣಿಮಾ.ಬಿ.ಆರ್)
ಆಯುಕ್ತರು
ಪುರಾತತ್ವ, ಸಂಗ್ರಹಾಲಯಗಳು ಮತ್ತು
ಪರಂಪರೆ ಇಲಾಖೆ, ಮೈಸೂರು